ಶ್ರೀ ಬಿ. ಎನ್. ಬಚ್ಚೇಗೌಡ :- ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರ ಕಾರ್ಪೊರೇಷನ್ ಹೊರತುಪಡಿಸಿ ಇರುವ ಮಹಾನಗರಪಾಲಿಕೆ, ನಗರಸಭೆಗಳು ಮತ್ತು ಪುರಸಭೆ ಎಲ್ಲಾ ಅವರಿಗೇ ಬರುತ್ತದೆ. ಮಿರಾಜುದ್ದೀನ್ ಪಟೇಲರು ಪೌರಾಡಳಿತ ಸಚಿವರು ಇದುವರಿಗೆ ಬರುತ್ತದೆ.

ವಿಷಯ :- ಸಕಲೇಶಪುರ ನಗರಕ್ಕೆ ಕುಡಿಯುವ ನೀರಿನ ಸೌಲಭ್ಯ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 214 (1313)

ಶ್ರೀ ಬಿ. ಬಿ. ಶಿವಪ್ಪ (ಸಕಲೇಶಪುರ) :- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಕಲೇಶಪುರ ಪಟ್ಟಣಕ್ಕೆ ಕುಡಿಯುವ ನೀರಿನ ಸೌಲಭ್ಯಕ್ಕಾಗಿ ಈ ಹಿಂದೆ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು 45 ಲಕ್ಷ ರೂಪಾಯಿ ಅಂದಾಜು ತಯಾರಿಸುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ವಿಷಯವು ಕಾರ್ಯಗತವಾಗದೆ ಇರಲು ಕಾರಣವೇನು. ಹಾಗೂ ಈ ಕೆಲಸ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಬಿ. ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :-

ಅ) ಬಂದಿದೆ.

ಆ) ಸಕಲೇಶಪುರ ಬಾಳೆಗದ್ದೆ ನೀರು ಸರಬರಾಜು ಯೋಜನೆಗೆ ಸರ್ಕಾರವು ರೂ.18.0 ಲಕ್ಷಗಳ ಅಂದಾಜಿಗೆ ದಿನಾಂಕ : 24-6-1985 ರಲ್ಲಿ ಆನುಮೋದನೆ ನೀಡಿದ್ದು ಅಂದಾಜಿನಂತೆ ಎಲ್ಲಾ ಕಾಮಗಾರಿಗಳನ್ನು ಕಾರ್ಯಗತಗೊಳಿಸಲಾಗಿದ್ದು, ದಿನಾಂಕ : 14-2-95 ರಂದು ಪುರಸಭೆಗೆ ಹಸ್ತಾಂತರಿಸಲಾಗಿದೆ. ಯೋಜನೆಗೆ ಇದುವರಿಗೆ ರೂ.30.58 ಲಕ್ಷಗಳು ಖರ್ಚಾಗಿರುತ್ತದೆ. ಈ ಯೋಜನೆಗೆ ರೂ. 44.96 ಲಕ್ಷಗಳ ಪರಿಷ್ಕೃತ ಅಂದಾಜು ತಯಾರಿಸಿದ್ದು ಇತರೆ ಕೆಲಸಗಳಾದ ಇದರಡಿಯಲ್ಲಿ 30,000 ಗ್ಯಾಲನ್ ಜಲಸಂಗ್ರಹಾಗಾರದಿಂದ ವಿಸ್ತರಣಾ ವ್ಯವಸ್ಥೆ ಮತ್ತು ಇತರೆ ಕೆಲಸಗಳನ್ನು ಕೈಗೊಳ್ಳುವ ಬಗ್ಗೆ ಅವಕಾಶ ಕಲ್ಪಿಸಲಾಗಿದೆ.

ಶ್ರೀ ಬಿ. ಬಿ. ಶಿವಪ್ಪ :- ಮಾನ್ಯ ಅಧ್ಯಕ್ಷರೇ, ಉತ್ತರಗಳನ್ನು ಒದಗಿಸಲಾಗಿದೆ ಎಂದು ಹೇಳಿ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಉತ್ತರ ಬಂದಿದೆ. ಕುಡಿಯುವ ನೀರಿನ ತೊಂದರೆ ಇದೆ ಎನ್ನುವುದನ್ನು ಒಪ್ಪಿಕೊಂಡಿದ್ದಾರೆ. ನಂತರ ಇದಕ್ಕೆ 18 ಲಕ್ಷ ರೂಪಾಯಿ ಅಂದಾಜು ಮಾಡಿ 24-6-85 ರಲ್ಲಿ ಕೆಲಸವನ್ನು ತೀರಿಸಿ ಸುಮಾರು 30.58 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ 14-2-96 ರಲ್ಲಿ ಮುನಿಸಿಪಾಲಿಟಿಗೆ ವಹಿಸಿದೆ ಎಂದು ತಾವು ಇಲ್ಲಿ ಕಾಣಿಸಿದ್ದೀರಿ. ಮತ್ತು ಅದಲ್ಲದೆ 44-96 ಲಕ್ಷಗಳ ಪರಿಷ್ಕೃತ ಅಂದಾಜು

ತಯಾರು ಮಾಡಿ ಇತರ ಕೆಲಸಗಳಿಗೋಸ್ಕರ ಅದರ ವ್ಯವಸ್ಥೆಯನ್ನು ಮಾಡಿದೆ ಎಂದು ತಾವು ಹೇಳಿದ್ದೀರಿ. ಅದಕ್ಕೆ ನಾನು ಕೇಳುತ್ತಿರುವುದು 30.58 ಲಕ್ಷ ಅಲ್ಲದೆ 44.96 ಇದು ಬೇರೆ ಮೊತ್ತ. 18 ಲಕ್ಷ ರೂಪಾಯಿಗಳನ್ನು ಅಂದಾಜು ಮಾಡಿ 30.58 ಲಕ್ಷ ರೂಪಾಯಿಗಳು ಖರ್ಚಾಗಿದೆ ಎಂದು ಹೇಳಿ 14-2-96 ರಂದು ಪುರಸಭೆಗೆ ಹಸ್ತಾಂತರಿಸಲಾಗಿದೆ ಎಂದಿದ್ದೀರಿ. ಈ 30 ಲಕ್ಷ ರೂಪಾಯಿಗಳ ಕಾಮಗಾರಿ ಏನು ಎಂಬುದರ ಬಗ್ಗೆ ತಿಳಿಸಬಹುದೇ? 44.96 ಲಕ್ಷ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಗೆ ಮಂಜೂರಾಗಿರುವ ಮೇಲಿನ ಹಣ ಇನ್ನೂ ಬಿಡುಗಡೆಯಾಗಿಲ್ಲ. ಇಲಾಖೆಯಲ್ಲೇ ಇದೆ ಎಂದು ಹೇಳಿ ನಗರಸಭೆಯಿಂದ ಪತ್ರ 1-7-96 ರಲ್ಲಿ ಬರೆಯುತ್ತಾರೆ. ಹಣ ಬಿಡುಗಡೆಯಾಗಿಲ್ಲ, ಇದು ಇನ್ನು ಸಕಲೇಶಪುರ ಪಟ್ಟಣಕ್ಕೆ ಕುಡಿಯುವ ನೀರಿನ ಸೌಲಭ್ಯಕ್ಕಾಗಿ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು 45 ಲಕ್ಷ ರೂಪಾಯಿಗಳ ಅಂದಾಜು ತಯಾರಿಸಿದ್ದು ಈ ವಿಷಯದ ಕಡತ ಇನ್ನೂ ಕಾರ್ಯಗತವಾಗದೇ ಈ ಇಲಾಖೆಯಲ್ಲೇ ಇರುತ್ತದೆ ಎಂದು ಹೇಳಿ ಮೊನ್ನೆ ಅವರು ಕಾಗದವನ್ನು ಬರೆದಿದ್ದಾರೆ. ತಾವು ಉತ್ತರದಲ್ಲಿ ಬೇರೆ ರೀತಿ ಕಾಣಿಸಿದ್ದೀರಿ. ದಯಮಾಡಿ ಇದರ ಬಗ್ಗೆ ಹೇಳಬೇಕು.

ಶ್ರೀ ಬಿ. ಎನ್. ಬಚ್ಚೇಗೌಡ :- ಮಾನ್ಯ ಅಧ್ಯಕ್ಷರೇ, ಹೇಮಾವತಿ ಕೆನಾಲ್ ನಿಂದ ಸಕಲೇಶಪುರಕ್ಕೆ ನೀರನ್ನು ಕೊಡುವ ಯೋಜನೆ ಇದು 20 ಸಾವಿರ ಜನಸಂಖ್ಯೆ ಒಳಗೆ ಇರುವ ಸಂಪೂರ್ಣ ಸರ್ಕಾರವೇ ಭರಿಸುವಂಥ ಪೈಪ್ಡ್ ವಾಟರ್ ಸಪ್ಲೈಯಲ್ಲಿ ಬರುವ ಯೋಜನೆ. 1985 ರಲ್ಲಿ ಇದು 18 ಲಕ್ಷಕ್ಕೆ ಆದಂಥದ್ದು ಇದು 92-93 ರಲ್ಲಿ ಹಸ್ತಾಂತರದಿಂದ ಪುರಸಭೆಯವರಿಗೆ ಕೊಟ್ಟಮೇಲೆ ಸುಮಾರು 30.58 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅಂದರೆ ಸುಮಾರು 12 ಲಕ್ಷ ಗ್ಯಾಲನ್ ಮೇಲೆ ತರುವ ನೀರಿನ ಟ್ಯಾಂಕನ್ನು ಬಾಳೆಗದ್ದೆ ಬಡಾವಣೆಯಲ್ಲಿ ಕಟ್ಟಿರುವುದು. ಪಂಪುಮನೆ ಪಂಪುಹೌಸ್ ಮತ್ತು ಮೆಷನರಿ 160 ಮಿಲಿ ಮೀಟರ್ ವ್ಯಾಸದ ಪೈಪುಗಳನ್ನು ಹಾಕಿ 93 ರಲ್ಲಿ ಕಾರ್ಯಗೊಳಿಸಿರುವಂಥದ್ದು. ಮೂರನೆಯದು ಜಲಶುದ್ಧಿ ಕಾರ್ಯಾಗಾರದಿಂದ ಸುತ್ತಲೂ ತಂತಿ ಬೇಲಿಯನ್ನು ಹಾಗೂ ರಸ್ತೆ ಕಾಮಗಾರಿಯ ಕೆಲಸವನ್ನು 93 ರಲ್ಲಿ ಕಾರ್ಯಗತಗೊಳಿಸಿ ಎಕ್ಸ್ಟೆನ್ಷ್ರಾ ವರ್ಕ್ಸ್ ಅಂದರೆ 18 ಲಕ್ಷಕ್ಕೆ ಇನ್ನು 12 ಲಕ್ಷ ರೂಪಾಯಿ ಹಾಕಿ 30 ಲಕ್ಷ ರೂಪಾಯಿಗಳು ಈಗ ಖರ್ಚಾಗಿರುವುದು. ಮತ್ತೆ ತಾವು ಈಗ ಕೇಳಿರುವುದು ಕುಶಾಲ ನಗರ ಬಡಾವಣೆ ಮತ್ತು 150 ಮಿಲಿ ಮೀಟರ್ ವ್ಯಾಸದ ಬೀಡುಕಬ್ಬಿಣವನ್ನು ಕೊಡುವಂಥದ್ದು ಮೂಲಸ್ಥಾವರದಿಂದ ಅದು ಹೆಡ್ ವರ್ಕ್ಸ್ ಟ್ರೀಟ್ಮೆಂಟ್ ಪ್ಲಾಂಟ್ಗೆ ತರುವಂಥ ಕಾರ್ಯ ಆದಕ್ಕೆ 15 ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಅದಕ್ಕೋಸ್ಕರ 15 ಲಕ್ಷ ರೂಪಾಯಿಗಳನ್ನು ನಾವೇನೆ ಸಂಪೂರ್ಣ ಭರಿಸುತ್ತೇವೆ. ಅದು ಒಟ್ಟಾರೆ 45 ಲಕ್ಷ ರೂಪಾಯಿಗಳ ಯೋಜನೆ. ಇದರಲ್ಲಿ ಪುರಸಭೆಯದು ಯಾರೂ ಕೊಡುವಂಥದ್ದು ಇಲ್ಲ. ಈ ವರ್ಷದಲ್ಲಿ ಅದನ್ನು ಸಂಪೂರ್ಣವಾಗಿ ಸರ್ಕಾರ ನಾವೇ ತುಂಬುವುದರಿಂದ ಆ 15 ಲಕ್ಷ ರೂಪಾಯಿಗಳನ್ನು ತುಂಬಿ ಉಳಿದಂಥ ಎಲ್ಲಾ ಕೆಲಸಗಳನ್ನು ಮಾಡಿ ಕೊಡುತೇವೆ.

ಶ್ರೀ ಬಿ. ಬಿ. ಶಿವಪ್ಪ :- ತಾವು ಖರ್ಚು ಮಾಡಿದ್ದು 30 ಸೇರಿ ಇದು 15 ಲಕ್ಷ ರೂಪಾಯಿಗಳು.

ಶ್ರೀ ಬಿ. ಎನ್. ಬಚ್ಚೇಗೌಡ :- ಇನ್ನೂ 15 ಲಕ್ಷ ಸಂಪೂರ್ಣ ಯೋಜನೆ ಅಲ್ಲಿಯವರೆಗೂ ಬಂದಿದೆ ಯೋಜನೆಯ ಗಾತ್ರ. ಈಗ 45 ಲಕ್ಷ ರೂಪಾಯಿಗೆ ಆಗುತ್ತದೆ ಒಟ್ಟು ಯೋಜನೆ.

ಶ್ರೀ ಬಿ. ಬಿ. ಶಿವಪ್ಪ :- ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳಲ್ಲಿ ನನ್ನ ದೊಂದು ವಿನಂತಿ ತಾವೇನೊ ಖರ್ಚು ಮಾಡಿದ್ದೀರಿ, ಆದರೆ ತಾವು ಮೇಲೆ ಒಪ್ಪಿ ಕೊಂಡಿರುವ ರೀತಿಯಲ್ಲಿ ಕುಡಿಯುವ ನೀರಿನ ತೊಂದರೆ ಸಕಲೇಶಪುರಕ್ಕೆ ಇನ್ನು ತಪ್ಪಲಿಲ್ಲ. ಆದ್ದರಿಂದ ತಾವು ದಯಮಾಡಿ ಇದನ್ನು ಪರಿಶೀಲಿಸಿ ತಾವು ಈಗೇನು ಹಣವನ್ನು ಖರ್ಚು ಮಾಡಿದ್ದೀರಿ, ವಾಸ್ತವಾಂಶ ತಾವೇನು ಈಗ ಪಟ್ಟಿ ಕೊಟ್ಟಿದ್ದೀರಿ, ಅದರಿಂದಲೆ ಸರಿಯಾಗಿ ಖರ್ಚಾಗಿದೆಯೇ? ಖರ್ಚಾಗದಿದ್ದರೆ ಏಕೆ ಸರಿಯಾಗಿ ಖರ್ಚಾಗಲಿಲ್ಲ? ಕುಡಿಯುವ ನೀರಿನ ಬವಣೆ ಏನಿದೆ, ಅದನ್ನು ತಪ್ಪಿಸಲಿಕ್ಕೆ ತಾವೇನು ಪ್ರಯತ್ನ ಮಾಡುತ್ತೀರಿ? ಸಾಕಷ್ಟು ಹಣ ಖರ್ಚು ಮಾಡಿದ್ದೀರಿ. ಆದರೆ ವ್ಯವಸ್ಥೆಯಾಗಲಿಲ್ಲ. ಕುಡಿಯುವ ನೀರು ಬರಲಿಲ್ಲ. ಸಾಕಷ್ಟು ನೀರು ಸಪ್ಲೈ ಆಗುತ್ತಿಲ್ಲ. ನೀರಿಗೆ ತುಂಬಾ ತೊಂದರೆ ಇದೆ ಸಕಲೇಶಪುರದಲ್ಲಿ. ತಮಗೆ ಗೊತ್ತಿರಬಹುದು. ಇವತ್ತು ಮಳೆಗಾಲ ಪ್ರಾರಂಭವಾಯಿತು. ಎಲ್ಲರೂ ಸಂಪೂರ್ಣವಾಗಿ ಕೆಂಪು ನೀರನ್ನು ಕುಡಿಯಬೇಕು. ಒಳ್ಳೆಯ ನೀರು ಸಿಗುವುದಿಲ್ಲ. ಏಕೆಂದರೆ ನೇರವಾಗಿ ಹೇಮಾವತಿ ನದಿಯಿಂದ ಬರುತ್ತಿರುವಂಥ ನೀರು, ಇದು ಫಿಲ್ಟರ್ ಆಗುವುದಿಲ್ಲ. ಅಂದ ಮೇಲೆ ಈ ವ್ಯವಸ್ಥೆಗೆ ತಾವೇನು ಖರ್ಚುಮಾಡಿದ್ದೀರಿ? ಇದನ್ನು ದಯಮಾಡಿ ತಾವು ಪರಿಶೀಲಿಸಬೇಕು ಎಂದು ತಮ್ಮ ಮುಖಾಂತರ ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎನ್. ಬಚ್ಚೇಗೌಡ :- ಮಾನ್ಯ ಅಧ್ಯಕ್ಷರೇ, ಪರಿಶೀಲಿಸಿ ವರದಿ ತರಿಸಿ ಉಳಿದ ಕೆಲಸಗಳನ್ನು ನೀರನ್ನು ಒದಗಿಸುವಂಥದ್ದಕ್ಕೆ ಹಣ ತೊಡಗಿಸಿ ಸಂಪೂರ್ಣವಾಗಿ ಈ ಸಾರಿಯೇ ಮಾಡಿಕೊಡುತ್ತೇವೆ. ಏಕೆಂದರೆ ಇದರಲ್ಲಿ ಹಣ ಪೈಪ್ಡ್ ವಾಟರ್ ಸಪ್ಲೈ ಆದ್ದರಿಂದ ನಾವೇನೆ ಮಾಡುವಂಥದ್ದು. ಆದ್ದರಿಂದ ಸರ್ಕಾರ ಈ ಸಾರಿ 96-97 ರಲ್ಲಿ ಹಣ ತೊಡಗಿಸಿ ಆದನ್ನು ಮಾಡುಕೊಡುತ್ತೇನೆ.

ವಿಷಯ :- ಮೈಸೂರು ನಗರದ ಸಿದ್ಧಾರ್ಥ ಬಡಾವಣೆಗೆ 5 ಲಕ್ಷ ಗ್ಯಾಲನ್ ಸಾಮರ್ಥ್ಯದ ಜಲಸಂಗ್ರಹಾಗಾರ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 218 (751)

ಶ್ರೀ ಇ. ಮಾರುತಿ ರಾವ್ ಪವಾರ್ (ನರಸಿಂಹರಾಜು) :- ಮಾನ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಮೈಸೂರು ನಗರದ ಸಿದ್ಧಾರ್ಥ ಬಡಾವಣೆಯಲ್ಲಿ 5 ಲಕ್ಷ ಲೀಟರ್ ಸಾಮರ್ಥ್ಯದ ಆರ್.ಸಿ.ಸಿ. ಜಲಸಂಗ್ರಹಾಗಾರ ಪೂರ್ಣಗೊಂಡಿದ್ದು ನೀರು ತುಂಬಿಸುವ ಕಾರ್ಯವು ವಿಳಂಬವಾಗಿರುವುದಕ್ಕೆ ಕಾರಣವೇನು?

2) ಕಣಿಯರ ರಾಮಮಂದಿರ, ನಾಯ್ಡುನಗರ, ಸುಭಾಶ್‌ನಗರ, ಗಾಯತ್ರಿಪುರಂ ಬಡಾವಣೆಗಳಲ್ಲಿ ಕಳೆದ 10 ವರ್ಷಗಳ ಹಿಂದೆ ಪ್ರಾರಂಭವಾದ ಕಾಮಗಾರಿಯು ಪೂರ್ಣಗೊಳ್ಳದಿರಲು ಕಾರಣವೇನು. ಪೂರ್ಣಗೊಳ್ಳಲು ತಗಲುವ ಸಮಯವೆಷ್ಟು?